ವಿಷಯ :- ಗುಲ್ಬರ್ಗಾ, ಧಾರವಾಡ, ಹುಬ್ಬಳ್ಳಿ, ಬೆಳಗಾವಿ ನಗರದಲ್ಲಿ ಹೊಸ ಪೋಲೀಸ್ ಠಾಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 923 (1563)

ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) :- ಮಾನ್ಯ ಗೃಹ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದ ಗುಲ್ಬರ್ಗಾ ನಗರ, ಧಾರವಾಡ, ಹುಬ್ಬಳ್ಳಿ ನಗರ ಬೆಳಗಾಂವಿ ನಗರಗಳಲ್ಲಿ ಇರುವ ಪ್ರತಿಯೊಂದು ನಗರಗಳಲ್ಲಿನ ಪೋಲೀಸ್ ಠಾಣೆಗಳೆಷ್ಟು; (ವಿವರ ನೀಡುವುದು)

(ಆ) ವಿಜಾಪುರ ನಗರದಲ್ಲಿರುವ ಪೋಲೀಸ್ ಠಾಣೆಗಳೆಷ್ಟು; ಅತ್ಯಂತ ಅವಶ್ಯವಾಗಿ ಬೇಕಾಗಿರುವ ಪೋಲೀಸ್ ಠಾಣೆಗಳೆಷ್ಟು?

ಇ) ವಿಜಾಪುರ ನಗರದಲ್ಲಿರುವ ಪೋಲೀಸ್ ಅಧಿಕಾರಿಗಳು ಮತ್ತು ಪೋಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಸಂಪೂರ್ಣ ವಿವರ ನೀಡುವುದು)

ಈ) ಆಂದಾಜು ಮೂರು ಲಕ್ಷಕ್ಕಿಂತ ಹೆಚ್ಚಿರುವ ಜನಸಂಖ್ಯೆಯುಳ್ಳ ವಿಜಾಪುರ ನಗರಕ್ಕೆ ಈಗಿರುವ ಪೋಲೀಸ್ ಬಲವು ಸಮರ್ಪಕವಾಗಿದೆಯೇ? ಇಲ್ಲದಿದ್ದಲ್ಲಿ ಸರ್ಕಾರ ದವರು ಕೈಗೊಳ್ಳಲಿರುವ ಕ್ರಮಗಳೇನು?

ಉ) ಪ್ರಸಕ್ತ ವರ್ಷದಲ್ಲಿ ಎಷ್ಟು ಪೋಲೀಸ್ ಠಾಣೆಗಳನ್ನು ತೆರೆಯಲಾಗುವುದು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :-

ಅ) **ಪೋಲೀಸ್ ಠಾಣೆಗಳ ಸಂಖ್ಯೆ :**

1. ಗುಲ್ಬರ್ಗಾ ನಗರ - 10
2. ಹುಬ್ಬಳ್ಳಿ-ಧಾರವಾಡ - 16
3. ಬೆಳಗಾವಿ ನಗರ - 11

ವಿವರಗಳು

ಗುಲ್ಬರ್ಗಾ ನಗರ

1. ಚೌಕ
2. ಸ್ಟೇಶನ್ ಬಜಾರ್
3. ಅಶೋಕ ನಗರ
4. ಬ್ರಹ್ಮಪುರ
5. ರಾಘವೇಂದ್ರ ನಗರ
6. ರೋಜಾ
7. ಮಹಾತ್ಮಾ ಬಸವೇಶ್ವರ
8. ಯುನಿವರ್ಸಿಟಿ
9. ಮಹಿಳಾ ಪೋಲೀಸ್ ಠಾಣೆ
10. ಸಂಚಾರ ಠಾಣೆ

ಹುಬ್ಬಳ್ಳಿ-ಧಾರವಾಡ

1. ಧಾರವಾಡ ಪಟ್ಟಣ
2. ಧಾರವಾಡ ಸಬರ್ಬನ್
3. ವಿದ್ಯಾಗಿರಿ
4. ಹುಬ್ಬಳ್ಳಿ ನಗರ
5. ಘಂಟೀಕೇರಿ
6. ಬೆಂಡಿಗೇರಿ
7. ಹಳೆ ಹುಬ್ಬಳ್ಳಿ
8. ಕಸಬಾಪೇಟೆ
9. ಹುಬ್ಬಳ್ಳಿ-ಸಬರ್ಬನ್
10. ವಿದ್ಯಾಗಿರಿ
11. ಗೋಕುಲ ರಸ್ತೆ
12. ಕೇಶವಾಪುರ
13. ಕಮರೀಪೇಟೆ
14. ಹುಬ್ಬಳ್ಳಿ ಸಂಚಾರ
15. ಧಾರವಾಡ ಸಂಚಾರ
16. ಮಹಿಳಾ ಪೋಲೀಸ್ ಠಾಣೆ.

ಬೆಳಗಾವಿ

1. ಮಾರ್ಕೆಟ್
2. ಶಹಾಪುರ
3. ಎ.ಪಿ.ಎಂ.ಸಿ. ಯಾರ್ಡ್
4. ಮುಳಮಾರುತಿ
5. ಖಡೇಬಜಾರ
6. ಉದ್ಯಾಮ್‌ಬಾಗ್
7. ಕ್ಯಾಂಪ್
8. ತಿಲಕವಾಡಿ
9. ಸಂಚಾರ ಉತ್ತರ
10. ಸಂಚಾರ ದಕ್ಷಿಣ
11. ಮಹಿಳಾ ಠಾಣೆ

ಆ) ವಿಜಾಪುರ ನಗರದಲ್ಲಿನ ಪೋಲೀಸ್ ಠಾಣೆಗಳ ಸಂಖ್ಯೆ 4

ಜಲನಗರ ಮತ್ತು ಆದರ್ಶನಗರಗಳಲ್ಲಿ ಠಾಣೆಗಳನ್ನು ತೆರೆಯಲು ವಿಜಾಪುರ ಜಿಲ್ಲಾ ಎಸ್. ಪಿ.ಯವರು ಪ್ರಸ್ತಾಪಿಸಿದ್ದು, ಅದು ಪರಿಶೀಲನೆಯಲ್ಲಿದೆ.

ಸಿವಿಲ್ ಸಿಬ್ಬಂದಿ

1. ಎಸ್. ಪಿ	-	1
2. ಆಡಿಷನಲ್ ಎಸ್. ಪಿ	-	1
3. ಡಿ.ಎಸ್.ಪಿ.	-	11
4. ಪಿ. ಐ.	-	2
5. ಪಿ. ಎಸ್. ಐ.	-	8
6. ಎ. ಎಸ್. ಐ.	-	9
7. ಸಿ. ಹೆಚ್. ಸಿ	-	42
8. ಮಹಿಳಾ ಹೆಚ್. ಸಿ	-	3
9. ಸಿವಿಲ್ ಪಿ. ಸಿ.	-	155
10. ಮಹಿಳಾ ಪಿ. ಸಿ	-	9

ಸಶಸ್ತ್ರ ಸಿಬ್ಬಂದಿ		
1. ಡಿ.ಎಸ್.ಪಿ	-	1
2. ಆರ್.ಪಿ.ಐ.	-	2
3. ಆರ್.ಎಸ್.ಐ.	-	6
4. ಎ.ಆರ್.ಎಸ್.ಐ.	-	12
5. ಎ.ಹೆಚ್.ಸಿ.	-	59
6. ಎ.ಪಿ.ಸಿ.	-	267

ಈ) 1991 ರ ಜನಗಣತಿ ಪ್ರಕಾರ ವಿಜಾಪುರ ನಗರದ ಜನಸಂಖ್ಯೆ 1,93,038 ಆದಕ್ಕೆ ಸಧ್ಯಕ್ಕೆ ಈಗಿರುವ ಸಿಬ್ಬಂದಿ ಸಮರ್ಪಕವಾಗಿದೆ.

ಉ) ಪ್ರಸಕ್ತ ವರ್ಷದಲ್ಲಿ ರಾಜ್ಯದಲ್ಲಿ 12 ಹೊಸ ಪೋಲೀಸ್ ಠಾಣೆಗಳನ್ನು ತೆರೆಯಲಾಗುವುದು.

ವಿಷಯ :- ವಿದ್ಯುತ್‌ಚ್ಛಕ್ತಿ ಮಂಡಳಿ ಇಂಜಿನಿಯರ್‌ಗಳಿಗೆ ಭಡ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 924 (1719)

ಶ್ರೀ ಬಸವನಗೌಡ ಆರ್. ಪಾಟೀಲ್ (ವಿಜಾಪುರ) :- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಕಳೆದ ಹಲವಾರು ವರ್ಷಗಳಿಂದ ಇಂಜಿನಿಯರ್‌ಗಳಿಗೆ ಮೇಲ್ದರ್ಜೆ ಬಡ್ತಿ ನೀಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) 1988 ಕ್ಕಿಂತ ಹಿಂದಿನಿಂದಲೂ ಇಂಜಿನಿಯರ್‌ಗಳಿಗೆ ಮುಂದಿನ ಹುದ್ದೆಗಳಿಗೆ ಬಡ್ತಿ ನೀಡದೇ ಇರುವುದು ನಿಜವೇ ;

ಇ) ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಶರಣಪ್ಪ ಬಸಪ್ಪ ದರ್ಶಾನಪುರ (ಇಂಧನ ರಾಜ್ಯ ಸಚಿವರು) :-

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಇಂಜಿನಿಯರ್‌ಗಳಿಗೆ ಪದೋನ್ನತಿಯನ್ನು (ಮೇಲ್ದರ್ಜೆಗೆ ಬಡ್ತಿ) ಆಗಿಂದಾಗ್ಗೆ ಕೊಡಲಾಗುತ್ತಿದೆ.